# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ಸಂಖ್ಯೆ:ತುವಿ:ಶೈವಿ:UG:CE:2026-27: 2059

ದಿನಾಂಕ:19.08.2026

## ಸುತ್ತೋಲೆ

ವಿಷಯ:- 2026-27ನೇ ಶೈಕ್ಷಣಿಕ ಸಾಲಿಗೆ ವಿವಿಧ ಸ್ನಾತಕ ಪದವಿ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಪಟ್ಟಿ ಹಾಗೂ ಇನ್ನೂ ಇತರೆ ದಾಖಲೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಅನುಮೋದನೆಗಾಗಿ ಸಲ್ಲಿಸುವ ಕುರಿತು.

ಉಲ್ಲೇಖ:-1. ವಿವಿ ಅಧಿಸೂಚನೆ ಸಂಖ್ಯೆ:ತು.ವಿ:ಶೈ.ವಿ:UG:CE:2026-27/207 ದಿನಾಂಕ:16.04.2026.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:18.08.2026.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ 2026-27ನೇ ಶೈಕ್ಷಣಿಕ ಸಾಲಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷಗಳ ಸ್ನಾತಕ ಪದವಿ ಪ್ರೋಗ್ರಾಂಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಕ್ರೋಢೀಕೃತ ಪಟ್ಟಿಯನ್ನು ಅನುಮೋದನೆಗಾಗಿ ಸಲ್ಲಿಸುವ ಸಂಬಂಧ ಈ ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಅನುಸರಿಸುವಂತೆ ತಿಳಿಸಲಾಗಿದೆ.

- ❖ ಕಾಲೇಜು ಅಭಿವೃದ್ಧಿ ಮಂಡಳಿ (CDC) ಯಿಂದ ಸಂಯೋಜನೆ ಪಡೆದಿರುವ ಬಗ್ಗೆ ಸಂಯೋಜನೆ ಆದೇಶ ಪ್ರತಿಯನ್ನು ತಪ್ಪದೇ ಕಡ್ಡಾಯವಾಗಿ ಪ್ರವೇಶಾತಿ ಪಟ್ಟಿ ಜೊತೆ ಲಗತ್ತಿಸಿರಬೇಕು. ಇಲ್ಲವಾದಲ್ಲಿ ಪ್ರವೇಶಾತಿ ಅನುಮೋದನೆ ಪಟ್ಟಿಗಳನ್ನು ಸ್ವೀಕರಿಸಲಾಗುವುದಿಲ್ಲ.
- ❖ ವಿದ್ಯಾರ್ಥಿಗಳ ಹೆಸರುಗಳು ಆಂಗ್ಲ ಭಾಷೆಯಲ್ಲಿ Alphabetical order ಹಾಗೂ ಪ್ರಥಮ ವರ್ಷದ ಪಟ್ಟಿಯು ಯುಯುಸಿಎಂಎಸ್‌ನ ರಿಜಿಸ್ಟರ್ ನಂಬರ್ ಪ್ರಕಾರ (serial wise) ಬರುವಂತೆ ನಮೂದಿಸಿ ಪಟ್ಟಿಯನ್ನು ಸಲ್ಲಿಸಬೇಕು.
- ❖ ಪ್ರವೇಶಾನುಮೋದನೆ ಪಟ್ಟಿಯಲ್ಲಿ ಜನ್ಮ ದಿನಾಂಕ ಹಾಗೂ ಪ್ರವೇಶಾತಿ ದಿನಾಂಕವನ್ನು (ದಿನಾಂಕ/ತಿಂಗಳು/ವರ್ಷ) ಈ ಮಾದರಿಯಲ್ಲಿ ದಾಖಲಿಸತಕ್ಕದ್ದು.
- ❖ ವಿದ್ಯಾರ್ಥಿಗಳ ಜಾತಿ/ವರ್ಗ/ಉಪಜಾತಿ(ನಮೂನೆ-VIII(A)(B)&(C)) ಇತ್ಯಾದಿಗಳನ್ನು ವಿವಿಧ ನಮೂನೆಗಳಲ್ಲಿ ಸೂಚಿಸಿರುವಂತೆಯೇ ಸ್ಪಷ್ಟವಾಗಿ ಪ್ರವೇಶಾತಿ ಅನುಮೋದನೆ ಪಟ್ಟಿಯಲ್ಲಿ ನಮೂದಿಸಬೇಕು. ಇಲ್ಲವಾದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ.
- ❖ ನಮೂನೆಗಳ ಕಲಂಗಳಲ್ಲಿ ವಿವರಗಳನ್ನು ಸ್ಪಷ್ಟವಾಗಿ ದಾಖಲಿಸಿ ಕೊನೆಯಲ್ಲಿ ಪ್ರಾಂಶುಪಾಲರು ಈ ನಮೂನೆಗಳಲ್ಲಿ ವಿವರಗಳು ಸರಿಯಾಗಿರುವುದೆಂದು ದೃಢೀಕರಿಸಿ ಸಹಿ ಮಾಡಬೇಕು.
- ❖ ಶುಲ್ಕ ಪಾವತಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಗಳವರೆಗೆ ಪಾವತಿಸಲಾಗಿರುವ ಒಟ್ಟು ಶುಲ್ಕವನ್ನು ಪ್ರವೇಶಾತಿ ಕಡೆಯ ದಿನಾಂಕದ ನಂತರ ಕ್ರೋಢೀಕೃತ ಶುಲ್ಕವನ್ನು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಖಾತೆ ಸಂಖ್ಯೆ: **36954906897** ಗೆ ಮಾತ್ರ ಸಂದಾಯ ಮಾಡಿ ಹಣಕಾಸು ಅಧಿಕಾರಿಗಳಿಂದ ದೃಢೀಕರಿಸಿ ಪ್ರವೇಶಾತಿ ಅನುಮೋದನೆ ಪಟ್ಟಿಯೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಹಣ ಸಂದಾಯವಾದ ಸಂಬಂಧ ದಾಖಲೆ ಸಲ್ಲಿಸಬೇಕು.
- ❖ ನಮೂನೆ 8ರ ಅನುಬಂಧದಲ್ಲಿ ತಿಳಿಸಿರುವಂತೆ ಪ್ರಥಮ ದ್ವಿತೀಯ ಮತ್ತು ತೃತೀಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಅಂಕಿ-ಅಂಶಗಳನ್ನು ಕಾಂಬಿನೇಷನ್‌ವಾರು ಕಡ್ಡಾಯವಾಗಿ ವಿಶ್ವವಿದ್ಯಾನಿಲಯಕ್ಕೆ ಇ-ಮೇಲ್ ಮೂಲಕ dracademictut@gmail.com ಕಳುಹಿಸುವುದು ಹಾಗೂ ಪಟ್ಟಿಯೊಂದಿಗೆ ಸಲ್ಲಿಸಬೇಕು. ಅಂಕಿ-ಅಂಶಗಳನ್ನು ಒದಗಿಸುವಲ್ಲಿ ವ್ಯತ್ಯಾಸವಾದಲ್ಲಿ ಅಯಾ ಕಾಲೇಜಿನ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ.
- ❖ ಪ್ರವೇಶಾತಿ ನಿಯಮಗಳ ವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಈ ಬಗ್ಗೆ ವಿಶ್ವವಿದ್ಯಾನಿಲಯದ ನಿಯಮಗಳನ್ನು ಉಲ್ಲಂಘಿಸದಂತೆ ಕ್ರಮವಹಿಸುವುದು.

ಪು.ತಿ.ನೋ...

❖ ಯುಜಿಸಿ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ, ಲೋಕಸಭೆಯ/ ವಿಧಾನ ಸಭೆ/ ವಿಧಾನ ಪರಿಷತ್ ಸದಸ್ಯರುಗಳು ಆಗಿಂದಾಗ್ಗೆ ಕೋರುವ ಒಟ್ಟು ವಿದ್ಯಾರ್ಥಿಗಳ (ಜಾತಿ/ ಉಪಜಾತಿ/ ವರ್ಗಾವಾರು) ಸಂಖ್ಯೆಗಳನ್ನು ಇತರೆ ಅಂಶಗಳನ್ನು ಒದಗಿಸುವ ನಮೂನೆಗಳಲ್ಲಿ ಅಂಕಿ-ಅಂಶಗಳ ಮಾಹಿತಿಯನ್ನು ಖಚಿತವಾಗಿ ನೀಡಬೇಕು. ಕಾಲೇಜಿನಿಂದ ನೀಡಿದ ಮಾಹಿತಿಯಲ್ಲಿ ತಪ್ಪುಗಳಿದ್ದಲ್ಲಿ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ.

❖ 2026-27ನೇ ಶೈಕ್ಷಣಿಕ ಸಾಲಿಗೆ ಪ್ರವೇಶಾತಿ ಪಡೆದ ಪ್ರಥಮ/ ದ್ವಿತೀಯ/ ತೃತೀಯ ವರ್ಷದ ಸ್ನಾತಕ ಪದವಿ ಕೋರ್ಸುಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಮಾಹಿತಿಯನ್ನು ಭರ್ತಿ ಮಾಡಿರುವ ಕ್ರೋಢೀಕೃತ ಪಟ್ಟಿಯ ಪ್ರಿಂಟ್ ತೆಗೆಯುವ ಮೊದಲು ಯುಯುಸಿಎಂಎಸ್‌ನಲ್ಲಿ ಮತ್ತೊಮ್ಮೆ ಪರಿಶೀಲಿ, ನಂತರ ಪ್ರಿಂಟ್ ತೆಗೆಯುವಂತೆ ತಿಳಿಸಲಾಗಿದೆ. ಕಾರಣ ಪ್ರಾಂಶುಪಾಲರ ಲಾಗಿನ್‌ನಿಂದ ವಿಶ್ವವಿದ್ಯಾನಿಲಯದ ಅನುಮೋದನೆಗೆ (Admission submit ot University) ಸಲ್ಲಿಸಿದ ನಂತರ ಯಾವುದೇ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

❖ ವಿಶ್ವವಿದ್ಯಾನಿಲಯಕ್ಕೆ ಪ್ರವೇಶಾತಿ ಶುಲ್ಕ ಸಂದಾಯವಾಗಿರುವ ಬಗ್ಗೆ ಖಾತರಿಪಡಿಸಿಕೊಂಡು ಪಟ್ಟಿಯನ್ನು ಸಲ್ಲಿಸತಕ್ಕದ್ದು. ಹಾಗೂ ಪಟ್ಟಿ ಸಲ್ಲಿಸಿದ ನಂತರ ವಿದ್ಯಾರ್ಥಿಗಳ ಪ್ರವೇಶಾತಿ ದಿನಾಂಕಗಳ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

❖ ವಿದ್ಯಾರ್ಥಿಗಳಿಂದ ಶುಲ್ಕವನ್ನು ನಗದಾಗಿ ಪಡೆದಿದ್ದಲ್ಲಿ ಅವರಿಗೆ ರಶೀದಿಯನ್ನು ಕಾಲೇಜಿನ ವತಿಯಿಂದ ನೀಡತಕ್ಕದ್ದು. ಈ ರೀತಿ ನೀಡಿದ ರಶೀದಿಗಳಿಗೆ ಸಂಬಂಧಿಸಿದ ರಶೀದಿ ಪುಸ್ತಕಗಳನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಪರಿಶೀಲನೆಗಾಗಿ ಸಲ್ಲಿಸುವಂತೆ ತಿಳಿಸಿದ ಸಮಯದಲ್ಲಿ ತಪ್ಪದೇ ಹಾಜರುಪಡಿಸಬೇಕು.

❖ ಅನುಬಂಧ-01 ರಿಂದ 12 ರ ತನಕ ತಿಳಿಸಿರುವ ಎಲ್ಲಾ ನಮೂನೆಗಳನ್ನು ಕ್ರೋಢೀಕರಿಸಿ ಕಡ್ಡಾಯವಾಗಿ **ಬುಕ್‌ಲೆಟ್ ಮಾದರಿಯಲ್ಲಿ ಒಂದು ಪ್ರತಿಯಲ್ಲಿ (Single Set) ಸಿದ್ಧಪಡಿಸಿ ಪ್ರವೇಶಾನುಮೋದನೆಗಾಗಿ** ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

❖ **2024-25 ಮತ್ತು 2025-26ನೇ ಸಾಲಿನಲ್ಲಿ ಬಾಕಿ ಉಳಿಸಿಕೊಂಡಿರುವ ಪ್ರವೇಶಾತಿ ಶುಲ್ಕವನ್ನು 2026-27ನೇ ಸಾಲಿನ ಪ್ರವೇಶಾನುಮೋದನೆಗೆ ಹಾಜರಾಗುವ ಮುಂಚಿತವಾಗಿ ವಿಶ್ವವಿದ್ಯಾನಿಲಯಕ್ಕೆ ಪಾವತಿಸಿ ದೃಢೀಕೃತ ಚಲನ್ ಪ್ರತಿಯನ್ನು ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸುವುದು.**

ಮೇಲಿನ ಎಲ್ಲಾ ಸೂಚನೆ/ ನಿಯಮಗಳನ್ನು ಕಾಲೇಜು/ ಸಂಸ್ಥೆಯವರು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು

ಗೆ

1. ಎಲ್ಲಾ ಪ್ರಾಂಶುಪಾಲರುಗಳು ಘಟಕ ಹಾಗೂ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು- ಎಲ್ಲಾ ಪ್ರಾಂಶುಪಾಲರುಗಳಿಗೆ ಇಂದೇ ಇ-ಮೂಲಕ ಕಳುಹಿಸುವುದು ಹಾಗೂ ವೆಬ್‌ಸೈಟ್‌ನಲ್ಲಿ ಇಂದೇ ಪ್ರಕಟಿಸುವುದು.

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕಛೇರಿ ಪ್ರತಿ.